ಬಾಲಿವುಡ್

# ವೇದಿಕೆಯ ಮೇಲೆ ಕಾಜೋಲ್- ಕಂಗನಾ





ಬಿ–ಟೌನಿನಲ್ಲಿ 'ಗೆಳತಿ'ಯರ ಜೋಡಿಯೇ ವಿರಳ. ಅದರಲ್ಲಿಯೂ ಹೆಚ್ಚಿನ ನಟಿಯರೊಂದಿಗೆ ಆತ್ಮೀಯ ಸಂಬಂಧ ಹೊಂದಿರುವ ನಟಿಯರ ಸಂಖ್ಯೆ ಇನ್ನೂ ವಿರಳ. ಆ ಸಾಲಿನಲ್ಲಿ ಇರುವ ಕೆಲವೇ ನಟಿಯರಲ್ಲಿ ಕಾಜೋಲ್ ಒಬ್ಬರು. ಆದರೆ ಕಾಜೋಲ್‌ಗೂ ಬಿ–ಟೌನಿನಲ್ಲಿ ವೈರಿಯೊಬ್ಬರಿದ್ದಾರೆ. ಅದು ತುಸು ಹಳೆಯ ದ್ವೇಷ. ಅದೀಗ ಮತ್ತೆ ನೆನಪಾಗಿದ್ದು, ಇಬ್ಬರೂ ಮುಖಾಮುಖಿಯಾದ ಪ್ರಸಂಗ ಎದುರಾಗಿದ್ದರಿಂದ. ಅದು ಕೇವಲ ಮುಖಾಮುಖಿಯಲ್ಲ, ಕಾಜೋಲ್, ಆಕೆಗೆ ತಮ್ಮ ಕೈಯಿಂದಲೇ ಪ್ರಶಸ್ತಿ ಕೊಡಬೇಕಾದ ಪರಿಸ್ಥಿತಿ. ಆ ನಟಿ 'ರಿವಾಲ್ವರ್ ರಾಣಿ' ಕಂಗನಾ ರನೌತ್!

ಇಬ್ಬರ ನಡುವೆ ಶೀತಲ ಸಮರ ಶುರುವಾಗಿ ವರ್ಷಗಳೇ ಉರುಳಿದೆ. ಇದಕ್ಕೆ ಕಾರಣವಾಗಿದ್ದು ಕಾಜೋಲ್ ಪತಿ ಅಜಯ್ ದೇವಗನ್ ಜತೆ ಕಂಗನಾರ ಸಲಿಗೆ. 'ಒನ್ಸ್ ಅಪಾನ್ ಎ ಟೈಮ್ ಇನ್ ಮುಂಬೈ' ಚಿತ್ರದ ವೇಳೆ ಅಜಯ್ ಮತ್ತು ಕಂಗನಾ ಹತ್ತಿರವಾಗಿದ್ದರು. ಇಬ್ಬರ ನಡುವೆ ಏನೋ ಇದೆ ಎಂಬ ಗುಸು ಗುಸು ಬೇರೆ ಹಬ್ಬಿತ್ತು. ಉರಿಯುವ ಬೆಂಕಿಗೆ ತುಪ್ಪ ಸುರಿದಂತೆ, ಕಂಗನಾ ಸಂದರ್ಶನವೊಂದರಲ್ಲಿ 'ನನಗೆ ವಿವಾಹಿತ ಪುರುಷರ ಜತೆ ಸಂಬಂಧ ಇದೆ. ನನ್ನ ಜೀವನದಲ್ಲಿ ಎಸಗಿರುವ ದೊಡ್ಡ ತಪ್ಪು ಅದು' ಎಂದು ಹೇಳಿದ್ದಳು. ಗಾಳಿ ಸುದ್ದಿಗೆ ಅಷ್ಟಾಗಿ ಕಿವಿಗೊಡದಿದ್ದ ಕಾಜೋಲ್, ಈ ಸಂದರ್ಶನದ ಬಳಿಕ ಕಂಗನಾ ಮೇಲೆ ಸಿಕ್ಕಾಪಟ್ಟೆ ಕೋಪಗೊಂಡಿದ್ದರಂತೆ. ಆಗಲೇ ಇಬ್ಬರ ನಡುವೆ ಮುಸುಕಿನ ಯುದ್ಧ ಶುರುವಾಗಿದ್ದು. ಆದರೆ ಮೊನ್ನೆ ಫ್ಯಾಷನ್ ನಿಯತಕಾಲಿಕೆಯೊಂದು ಆಯೋಜಿಸಿದ್ದ ಸಿನಿಮಾ ಪ್ರಶಸ್ತಿ ವಿತರಣೆ ಸಮಾರಂಭದಲ್ಲಿ ಕಂಗನಾಗೆ ಉತ್ತಮ ನಟಿ ಪ್ರಶಸ್ತಿ ನೀಡಿದ್ದು ಕಾಜೋಲ್. ಇಬ್ಬರಿಗೂ ಮುಜುಗರವಾದರೂ ಗೊಂದಲಕ್ಕೆ ಅವಕಾಶ ಉಂಟಾಗದಂತೆ ನಿಭಾಯಿಸಿದರಂತೆ. ಆದರೆ ಸಮಾರಂಭ ಮುಗಿಯುವವರೆಗೂ ಇಬ್ಬರು ಮತ್ತೆ ಪರಸ್ಪರ ಎದುರಾಗಲೇ ಇಲ್ಲ.

# ಬಾಕ್ಸರ್ ಪ್ರಿಯಾಂಕಾ

ಕೈಗೆ ಗವಸುಗಳನ್ನು ತೊಟ್ಟ ಪ್ರಿಯಾಂಕಾ ಚೋಪ್ರಾರ ಪೋಸ್ಟರ್‌ಗಳು ಎಲ್ಲೆಡೆ ಕಾಣಿಸುತ್ತಿವೆ. ಬಾಕ್ಸರ್ ಮೇರಿ ಕೋಮ್ ಅವರ ಜೀವನಾಧಾರಿತ ಚಿತ್ರದಲ್ಲಿ ಪಿಗ್ಗಿ ತಮ್ಮನ್ನು ಅತಿ ಆಸಕ್ತಿಯಿಂದ ತೊಡಗಿಸಿಕೊಂಡಿದ್ದಾರೆ. ಈ ಚಿತ್ರ ಬಾಲಿವುಡ್‌ನಲ್ಲಿ ಕ್ರೀಡಾ ವಿಷಯದ ಚಿತ್ರದ ಪಟ್ಟಿಗೆ ಸೇರುವುದನ್ನು ಪ್ರಿಯಾಂಕಾ ಒಪ್ಪುವುದಿಲ್ಲ. ಇದನ್ನು ನಿರ್ದಿಷ್ಟ ಟ್ರೆಂಡ್ ಸಿನಿಮಾ ಸಾಲಿಗೆ ಸೇರಿಸಿದರೆ ಅದು ಮೇರಿ ಕೋಮ್ ಅವರಿಗೆ ತೋರುವ ಅಗೌರವವಾಗುತ್ತದೆ ಎಂಬ ಭಾವನೆ ಅವರದು.

'ಪಾನ್ ಸಿಂಗ್ ತೋಮರ್' ಮತ್ತು 'ಭಾಗ್ ಮಿಲ್ಖಾ ಭಾಗ್' ಇಬ್ಬರು ಕ್ರೀಡಾ ಸಾಧಕರ ಬದುಕನ್ನು ಚಿತ್ರಿಸಿದ ಸಿನಿಮಾಗಳಾಗಿದ್ದವು. ಜತೆಗೆ ಪ್ರಶಸ್ತಿಗಳನ್ನೂ ಬಾಚಿಕೊಂಡಿದ್ದವು. ಅವುಗಳಂತೆಯೇ ಮೇರಿ ಕೋಮ್ ಅವರ ಜೀವನ ಆಧಾರಿತ ಚಿತ್ರ ಎಂಬುದು ಸರಿಯಲ್ಲ– ಎನ್ನುವುದು ಆಕೆಯ ಅಭಿಪ್ರಾಯ. 'ಮೇರಿ ಕೋಮ್ ನಮ್ಮ ರಾಷ್ಟ್ರದ ಹೆಮ್ಮೆ. ಇದು ನನ್ನ ವೃತ್ತಿ ಬದುಕಿನಲ್ಲಿಯೇ ಅತ್ಯಂತ ಕಷ್ಟಕರ ಪಾತ್ರ' ಎನ್ನುವ ಪಿಗ್ಗಿ, ಚಿತ್ರ ಬಿಡುಗಡೆಯ ಸೆಪ್ಟೆಂಬರ್ 5ಕ್ಕೆ ಕಾತರದಿಂದ ಕಾಯುತ್ತಿದ್ದಾಳೆ.





# ಆಲಿಯಾ ನೇರ ಮಾತು

'ಮೂರು ಸಿನಿಮಾಗಳಲ್ಲೇ ಇಷ್ಟು ಒಳ್ಳೆ ಹೆಸರು ಪಡೆದುಕೊಂಡಿದ್ದೀರಲ್ಲಾ, ಶಾರೂಕ್, ಅಮೀರ್ ಮತ್ತು ಸಲ್ಮಾನ್ ಜೊತೆ ನಟಿಸುವ ಆಸೆ ಇಲ್ಲವೇ' ಎಂದು ಅಲಿಯಾ ಭಟ್‌ಳನ್ನು ಕೇಳಿದರೆ, 'ಅವರೊಂದಿಗೆ ನಟಿಸಲು ನಾನು ತುಂಬಾ ಚಿಕ್ಕವಳು' ಎಂದಳಂತೆ!

ಆಕೆಯ ಮಾತು ನಿಜವೇ. ಬಿ–ಟೌನಿಗೆ ಕಾಲಿಡುವ ಬಹುತೇಕ ನಟಿಯರೆಲ್ಲ ಈ ಮೂವರ ಜತೆ ನಟಿಸಬೇಕು ಎಂದು ಕಂಡ ಕಂಡ ಪತ್ರಕರ್ತರ ಮುಂದೆಲ್ಲ ಆಸೆ ವ್ಯಕ್ತಪಡಿಸುತ್ತಾರೆ. ಆದರೆ ಅಲಿಯಾ ತೀರಾ ವಾಸ್ತವವಾದಿಯಂತೆ ಮಾತನಾಡಿದ್ದಾರೆ. 'ಸದ್ಯಕ್ಕೆ ನನಗೆ ಆ ಹಂಬಲ ಇಲ್ಲ. ಏಕೆಂದರೆ ಆ ಪ್ರಬುದ್ಧತೆ ತನ್ನಲ್ಲಿ ಮೂಡಿಲ್ಲ' ಎನ್ನುವುದು 21ರ ಹರೆಯದ ಅಲಿಯಾಳ ನೇರ ಮಾತು.

■ ಅಮಿ